# ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್‌ಎಸ್ ಮೋನಪ್ಪ

## ಮಾಯಕ್ಕನ ಮದುವೆ, ವಿಚ್ಛೇದನ, ಮರುಮದುವೆ...

ಮಾಯಕ್ಕ ಗಂಡನ ಜೊತೆಗೆ ಜಗಳವಾಡತೊಡಗಿದ್ದಲ್ಲದೆ ಅವನಿಗೆ ಬೇಕಾದ್ದು ಬ್ಯಾಡಾದ್ದು ಅನ್ನತೊಡಗಿದಳು. ಹೇಗಾದರೂ ಸರಿ, ಗಂಡನ ಮನೆಯಿಂದ ಹೊರಟು ಹೋಗುವುದೇ ಮೇಲು. ತವರುಮನೆಯಲ್ಲಿ ಬೇಕಾದರೆ ಬೇರೆ ಮನೆ ಮಾಡಿಕೊಂಡು ಇರುತ್ತೇನೆ, ಈ ಮುತ್ತಪ್ಪನ ಮನೆಯಲ್ಲಿ, ಅವನ ಈ ಊರಿನಲ್ಲಿ ಸತ್ತರೂ ಇರಲಾರೆ. ಈಕೆಯನ್ನು ಬಿಟ್ಟು ಬಿಡುವುದೇ ಸರಿಯೆಂದು ಮುತ್ತಪ್ಪ, ಅವನ ತಂದೆತಾಯಿ, ಕೆಲವು ಹಿರಿಯರು ನಿರ್ಧಾರ ಮಾಡಿದರು. ಇತ್ತೀಚೆಗಷ್ಟೇ ಇವರ ಸಂಬಂಧಿ ಸೊಸೆಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಗಂಡ ಅತ್ತೆ ಮಾವರನ್ನು ಪೊಲೀಸರು ಕರೆದುಕೊಂಡು ಹೋಗಿ ಬೈಲಹೊಂಗಲದ ಸ್ಟೇಷನ್‌ದಲ್ಲಿ ಎಂಟು ದಿನ ಇಟ್ಟುಕೊಂಡು ಜಾಮೀನು ಮೇಲೆ ಬಿಡುಗಡೆ ಮಾಡಿದ್ದರು. ಜಾಮೀನು ತರಲಿಕ್ಕೆ ಎರಡು ಎಕರೆ ಹೊಲ ಮಾರಿದ್ದರಂತೆ.

